1987-88ರಿಂದ 1989-90ರ ಅವಧಿಯಲ್ಲಿ ಪ್ರಾರಂಭವಾದ ಘಟಕಗಳ ಪೈಕಿ ಕೆಲಸ ಮಾಡದ ಕೈಗಾರಿಕೆಗಳ ಸಂಖ್ಯೆ ಎಷ್ಟು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ರಾಜ್ಯಸರ್ಕಾರವು ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ಈ ಕೆಳಗಿನಂತೆ ಕ್ರಮವಹಿಸುವುದು.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಂಬಂಧಪಟ್ಟ ವಾಣಿಜ್ಯ ಬ್ಯಾಂಕುಗಳೊಡನೆ ಘಟಕದ ಪುನಶ್ಚೇತನದ ಬಗ್ಗೆ ಜಂಟೀ ಪರಿಶೀಲನೆ ಜರುಗಿಸುತ್ತದೆ.

ರಾಜ್ಯಸರ್ಕಾರವು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ : ಬ್ಯಾಂಕುಗಳ ಶಿಫಾರಸ್ಸಿನಂತೆ ಪ್ರತಿಯೊಂದು ಘಟಕಕ್ಕೆ ಗರಿಷ್ಠ ಮಿತಿ ರೂ.50,000 ಬೀಜಧನ ಸಾಲ ನೀಡುವುದು.

ಜಟಿಲವಾದ ನಿರ್ದಿಷ್ಟ ಸಮಸ್ಯೆಗಳನ್ನು ರಾಜ್ಯಮಟ್ಟದ ಹಣಕಾಸು ಸಂಸ್ಥೆಗಳ ಸಭೆಯಲ್ಲಿ ಸೂಕ್ತ ಪರಿಹಾರಕ್ಕೆ ಚರ್ಚಿಸಲಾಗುತ್ತದೆ.

ಸರ್ಕಾರವು ನಿರ್ದಿಷ್ಟ ಕೈಗಾರಿಕೆಗಳ ನಿರ್ದಿಷ್ಟ ಜಟಿಲ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಪಟ್ಟವರಿಗೆ ತಿಳಿಸುತ್ತದೆ.

ಅಧ್ಯಕ್ಷರು:– ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯು ಮುಂದಿಡಲಾಗುವ ಕಾಗದಪತ್ರಗಳು :

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ವಕ್ಫ್ ಹಾಗೂ ಇಂಧನ ಮಂತ್ರಿ) ಅವರು:- ಕಂಪನಿ ವ್ಯವಹಾರಗಳ ಶಾಸನದ 619 (ಎ) ಕಲಮಿನ ಮೇರೆಗೆ:–

1) 1988-89ನೇ ಸಾಲಿನ ಕರ್ನಾಟಕ ಇಂಪ್ಲಿಮೆಂಟ್ಸ್ ಆಂಡ್ ಮೆಷಿನರೀಸ್ ಕಂಪನಿ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿ ಮತ್ತು ವಾರ್ಷಿಕ ವರದಿ.

2) 1988-89ನೇ ಸಾಲಿನ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿ.

3) 1988-89ನೇ ಸಾಲಿನ ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಸ್ಟೀಲ್ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿ.

4) 1988-89ನೇ ಸಾಲಿನ ಕರ್ನಾಟಕ ವಿದ್ಯುತ್ ಕಾರ್ಖಾನೆ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿ.

5) 1986-87ನೇ ಸಾಲಿನ ಮೈಸೂರು ಸಕ್ಕರೆ ಕಾರ್ಖಾನೆ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿಗಳನ್ನು ಸಭೆಯ ಮುಂದೆ ಇಡುತ್ತೇನೆ.

6) ಕಂಪನಿ ವ್ಯವಹಾರಗಳ ಶಾಸನದ 619 (ಎ) (2) ಕಲಮಿನ ಮೇರೆಗೆ :–

1988-89ನೇ ಸಾಲಿನ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದೆ ಮಂಡಿಸಲಾಯಿತು.

— ಅರ್ಜಿಗಳನ್ನೊಪ್ಪಿಸುವುದು

ಶ್ರೀ ಪಿ. ಬಸವರಾಜ್:– ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪದ್ಮಶಾಲಿ ಶೆಟ್ಟಿಗಾರ ಜನಾಂಗವನ್ನು ಹಿಂದುಳಿದ ವರ್ಗಕ್ಕೆ ಸೇರಿಸುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.